# ಅಹಿಂಸೆ

**ಒಬ್ಬ** ರಾಜನಿಗೆ ತುಂಬ ಬೇಟೆಯ ಹುಚ್ಚು. ಪ್ರತಿದಿನ ಬೇಟೆಗೆ ಹೋಗಿ ಅನೇಕ ಪ್ರಾಣಿಗಳನ್ನು ಕೊಲ್ಲುತ್ತಿದ್ದ. ಅದೇ ಅವನಿಗೆ ಮಹದಾನಂದ. ಅವನ ಮಂತ್ರಿ ತುಂಬ ಧಾರ್ಮಿಕ ಸ್ವಭಾವದವನು. ಅವನು ಈ ರೀತಿಯ ಪ್ರಾಣಿ ಹಿಂಸೆಯನ್ನು ಸಹಿಸುತ್ತಿರಲಿಲ್ಲ. ರಾಜ ಬೇಟೆಯಾಡುವುದನ್ನು ತಪ್ಪಿಸುವುದಕ್ಕೆ ಮಂತ್ರಿ ಹಲವು ರೀತಿಯಲ್ಲಿ ಪ್ರಯತ್ನಿಸಿದ. ರಾಜನಿಗೆ ಮಂತ್ರಿಯ ಮೇಲೆ ತುಂಬ ಗೌರವ. ಆದರೂ ಬೇಟೆಯ ವಿಷಯದಲ್ಲಿ ಮಂತ್ರಿಯ ಮಾತನ್ನು ಕೇಳಲೇ ಇಲ್ಲ.



ಒಂದು ದಿನ ರಾಜನು ಬೇಟೆಗೆ ಹೋಗಿದ್ದನು. ಅವನಿಗೆ ಹುಲಿ ಕೂಗುತ್ತಿರುವ ಧ್ವನಿ ಕೇಳಿಸಿತು. ಇಂದು ತನ್ನ ಬಾಣಕ್ಕೆ ಹುಲಿಯೇ ಬಲಿಯಾಗುತ್ತಿದೆ ಎಂದು ರಾಜನಿಗೆ ಪರಮಾನಂದ. ಅವನು ಧ್ವನಿ ಬಂದ ಕಡೆ ಸದ್ದಿಲ್ಲದೆ ಮುಂದುವರಿದ. ದೂರದಲ್ಲಿ ಒಂದು ಹುಲಿ ಕಾಣಿಸಿತು. ಅದು ತನ್ನ ಮುಖವನ್ನು ಬೇರೆ ದಿಕ್ಕಿಗೆ ತಿರುಗಿಸಿಕೊಂಡಿತ್ತು. ಅದರ ಬೆನ್ನಿನ ಭಾಗ ಮಾತ್ರ ಅವನಿಗೆ ಕಾಣಿಸುತ್ತಿತ್ತು. ಅವನು ಸ್ವಲ್ಪವೂ ಸದ್ದು ಮಾಡದೆ ಸರಿಯಾಗಿ ಗುರಿಯಿಟ್ಟು ಬಾಣವನ್ನು ಬಿಟ್ಟ.

ಬಾಣ ತನ್ನ ಕೆಲಸವನ್ನು ಮಾಡಿತು. 'ಹಾ' ಎಂಬ ಮನುಷ್ಯನ ಆರ್ತನಾದ ಅವನಿಗೆ ಕೇಳಿಸಿತು. ರಾಜ ದಿಗ್ಭ್ರಾಂತನಾದ. ಹುಲಿಯ ಕಡೆ ಧಾವಿಸಿದ. ಹತ್ತಿರ ಹೋಗಿ ನೋಡುತ್ತಾನೆ. ಅಲ್ಲಿ ಹುಲಿಯೇ ಇರಲಿಲ್ಲ. ಅವನಿಗೆ ಪರಮಾಶ್ಚರ್ಯ! ಹುಲಿಯ ಚರ್ಮವನ್ನು ಹೊದ್ದಿದ್ದ ಮನುಷ್ಯನು ಕಾಣಿಸಿದನು. ಅವನು ನೆಲದ ಕಡೆ ಮುಖ ಮಾಡಿಕೊಂಡು ಮಲಗಿದ್ದ, ಬಾಣದ ಇರಿತದಿಂದ ತೀವ್ರವಾಗಿ ಸಂಕಟಪಡುತ್ತಿದ್ದ.

ರಾಜನು ಬಾಣವನ್ನು ತೆಗೆದನು. ಶರೀರವನ್ನು ತಿರುಗಿಸಿದನು. ಆಶ್ಚರ್ಯ! ಅದು ತನ್ನ ಆಪ್ತ ಮಂತ್ರಿ! ರಾಜನು ತುಂಬ ಪರಿತಪಿಸುತ್ತ 'ಹೀಗೇಕೆ ಮಾಡಿದೆ?' ಎಂದು ಕೇಳಿದನು.

'ನೀನು ಯಾವುದೇ ರೀತಿಯಲ್ಲಿಯೂ ಪ್ರಾಣಿ ಬೇಟೆಯನ್ನು ನಿಲ್ಲಿಸಲೇ ಇಲ್ಲ. ನನ್ನನ್ನೇ ಬಲಿ ಕೊಟ್ಟಾದರೂ ಪ್ರಾಣಿಹತ್ಯೆಯನ್ನು ನಿಲ್ಲಿಸೋಣ ಎಂದು ಹೀಗೆ ಮಾಡಿದೆ. ಇನ್ನಾದರೂ ನೀನು ಈ ಪ್ರಾಣಿ ಹಿಂಸೆಯನ್ನು ನಿಲ್ಲಿಸು' ಎನ್ನುತ್ತ ಪ್ರಾಣ ಬಿಟ್ಟ.

ರಾಜನ ಮೇಲೆ ಇದು ಎಂತಹ ಆಘಾತ ಉಂಟು ಮಾಡಿತೆಂದರೆ ಅಂದೇ ಅಲ್ಲಿಯೇ ಇನ್ನು ಬೇಟೆಯಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದ.

**ಪರಹಿಂಸೆಯಲ್ಲಿ ಆನಂದ ಪಡಬಾರದು. ಹಿಂಸೆಯಿಂದ ಇತರರಿಗೆ ಹೇಗೆ ದುಃಖವಾಗುತ್ತದೆ ಎಂಬುದನ್ನು ಚಿಂತಿಸಿದಾಗ ಹಿಂಸಾ ಪ್ರವೃತ್ತಿ ಕಡಮೆಯಾಗುತ್ತದೆ.**